# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 24-11-2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 1 | **ಶ್ರೀ.ಎನ್.ಆರ್.ಶ್ರೀಧರ ರೆಡ್ಡಿ** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಶ್ರೀಮತಿ.ಸುಮಿತ್ರ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು |
| 3 | ಶ್ರೀ.ಎಂ.ವೆಂಕಟೇಶ್ | ಸದಸ್ಯರು | | |
| 4 | ಶ್ರೀ.ಆರ್.ಚಂದ್ರಶೇಖರಯ್ಯ | ಸದಸ್ಯರು | | |
| 5 | ಶ್ರೀಮತಿ.ಸರಸ್ವತಮ್ಮ | ಸದಸ್ಯರು | | |
| 6 | ಶ್ರೀ.ಎಸ್.ಕೇಶವಮೂರ್ತಿ | ಸದಸ್ಯರು | | |
| 7 | ಶ್ರೀ.ಎನ್.ಪಿಳ್ಳಪ್ಪ | ಸದಸ್ಯರು | | |
| 8 | ಶ್ರೀಮತಿ.ಯಶೋದಮ್ಮ.ಕೆ.ಆರ್ | ಸದಸ್ಯರು | | |
| 9 | ಕೆ.ಎಲ್.ತಿಮ್ಮನಂಜಯ್ಯ | ಸದಸ್ಯರು | | |
| 10 | ಶ್ರೀ.ಆರ್.ಪ್ರಕಾಶ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

### 01] ವಿಷಯ ಸಂಖ್ಯೆಃ/87/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, Reconstruction of RCC box culvert across SWD (DH 211 @ ch: 1350m on main road of peenyv industrial association nea HDFC bank Chokkasandra of Dasarahalli Zone. ಕಾಮಗಾರಿಗೆ ರೂ. 129.00 ಲಕ್ಷಗಳಿಗೆ ದಿನಾಂಕಃ 29-05-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಟೆಂಡರಅನ್ನು ದಿನಾಂಕಃ 03-07-2012ರಂದು ತೆರೆಯಲಾಗಿ ನಾಲ್ಕು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ಪಡೆದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕಃ 16-07-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್ ವಿವರಗಳು ಕೆಳಕಂಡಂತಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊ ಂದಿಗೆ |
|---|---|---|---|---|---|
| 1 | ಶ್ರೀ.ಬಿ.ರಾಮಚಂದ್ರ | 129.00 | 125.34 | 13724906.92 | 11.49% ಕಡಿಮೆ |
| 2 | ಶ್ರೀ.ರಾಜಣ್ಣ | | | 15584704.00 | 0.5% ಹೆಚ್ಚು |
| 3 | ಶ್ರೀ.ಶೇಷಾದ್ರಿ | | | 15430479.00 | 0.49% ಹೆಚ್ಚು |
| 4 | ಶ್ರೀ.ಕೆ.ಸಿ.ಪ್ರಶಾಂತ್ | | | 15758725.00 | 1.62% ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈಕಾಮಗಾರಿಗೆ ಶ್ರೀ. ಬಿ.ರಾಮಚಂದ್ರ ರವರು ಟೆಂಡರ್ ಮೊತ್ತ ರೂ. 13724906.92ಗಳನ್ನು ನಮೂದಿಸಿದ್ದು, ಎಸ್.ಆರ್. ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿ ಶ್ರೀ. ಬಿ.ರಾಮಚಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.137249.06.92 (ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 22-08-2012ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 22-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 02] ವಿಷಯ ಸಂಖ್ಯೆಃ/92/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, RCC wall drain from point at DH 211A joins to Dasarahalli Tank in Dasarahalli Zone (link 211(length 1500-1975m) ಕಾಮಗಾರಿಗೆ ರೂ. 368.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಧಿಕಾರದಿಂದ ಅನುಮೋದನೆ ಪಡೆದು ದಿನಾಂಕಃ 29-05-2012ರಂದು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿರುತ್ತದೆ.

ಈ ಟೆಂಡರಅನ್ನು ದಿನಾಂಕಃ 03-07-2012ರಂದು ತೆರೆಯಲಾಗಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿರುತ್ತಾರೆ. ಮುಖ್ಯ ಅಭಿಯಂತರರು (ಮಳೆ ನೀರು ಚರಂಡಿ) ರವರಿಂದ ತಾಂತ್ರಿಕ ಬಿಡ್‌ಗೆ ಅನುಮೋದನೆ ಪಡೆದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ದಿನಾಂಕಃ 11-07-2012ರಂದು ತೆರೆಯಲಾಗಿರುತ್ತದೆ. ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್ ವಿವರಗಳು ಕೆಳಕಂಡಂತಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಟೆಂಡರ್‌ಗಿಟ್ಟ ಮೊತ್ತ (ಮಂಜೂರಾದ ಅಂದಾಜು ಪಟ್ಟಿಯ ದರದಂತೆ 2010-11ನೇ ಸಾಲಿನ ದರಪಟ್ಟಿಗೆ) ರೂ. ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2011-12ನೇ ಸಾಲಿನ ದರಪಟ್ಟಿಯ ದರಗಳಂತೆ) Issue rate ನೊಂದಿಗೆ |
|---|---|---|---|---|---|
| 1 | **ಶ್ರೀ.ಬಿ.ರಾಮಚಂದ್ರ** | 368.00 | 354.19 | 38686077.60 | 1.89% ಕಡಿಮೆ |
| 2 | **ಶ್ರೀ. ಟಿ. ಟಿ. ಪೆದ್ದಾ ಗುರುವಾರೆಡ್ಡಿ** | | | 41090417.00 | 8.22% ಹೆಚ್ಚು |

ಮೇಲ್ಕಂಡ ವಿವರಗಳನ್ನು ಪರಿಶೀಲಿಸಲಾಗಿ ಈಕಾಮಗಾರಿಗೆ ಶ್ರೀ. ಬಿ.ರಾಮಚಂದ್ರ ರವರು ಟೆಂಡರ್ ಮೊತ್ತ ರೂ. 38686077.60ಗಳನ್ನು ನಮೂದಿಸಿದ್ದು, ಎಸ್.ಆರ್. ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 1.89 ರಷ್ಟು ಕಡಿಮೆ ಇರುತ್ತದೆ.

ಪ್ರಸ್ತಾಪಿಸಿರುವ ಕಾಮಗಾರಿ ಶ್ರೀ. ಬಿ.ರಾಮಚಂದ್ರ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.38686077.60 (ಎಸ್.ಆರ್.ದರ 2011-12ರ ಮತ್ತು Issue rate ನೊಂದಿಗೆ ಹೋಲಿಸಿದಾಗ ಶೇಕಡ 11.49 ರಷ್ಟು ಕಡಿಮೆ) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 22-08-2012ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 22-08-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 03] ವಿಷಯ ಸಂಖ್ಯೆಃ103/2012-13

ವಿಷಯಃ- ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ.

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಗೊಂಡು 820 ಚ.ಕಿ.ಮೀಟರ್‌ಗಳ ವಿಸ್ತಾರವಾದ ಭೌಗೋಳಿಕ ಪ್ರದೇಶವನ್ನು ಒಳಗೊಂಡಿದ್ದು, ಇದಕ್ಕನುಗುಣವಾಗಿ ಉತ್ತಮಗುಣಮಟ್ಟದ ನಾಗರೀಕಸೌಲಭ್ಯಗಳನ್ನು ಒದಗಿಸುವುದು ಅತ್ಯಗತ್ಯವಾಗಿರುತ್ತದೆ. ಈ ಸಂಬಂಧವಾಗಿ ದೇಶದ ಇತರೇ ಮುಂದುವರಿದ ನಗರಗಳಿಗೆ ಭೇಟಿ ನೀಡಿ ಅಲ್ಲಿನ ನಗರಗಳ ಅಭಿವೃದ್ಧಿಗೆ ಅಳವಡಿಸಿಕೊಂಡಿರುವ ಅತ್ಯಾಧುನಿಕ ತಾಂತ್ರಿಕತೆ ಮತ್ತು ನೀತಿ ನಿಯಮಗಳ ಬಗ್ಗೆ ಅಧ್ಯಯನ ನಡೆಸಿ, ತತ್ಸಂಬಂಧವಾಗಿ ಬೆಂಗಳೂರು ನಗರದಲ್ಲೂ ಅಂತಹ ಆಧುನಿಕತೆಯನ್ನು ಅಳಡಿಸಿಕೊಂಡು ಬೆಂಗಳೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗಮನಹರಿಸುವುದು ಸೂಕ್ತವಾಗಿರುತ್ತದೆ. ಅದಕಾರಣ, ದೇಶದ ಮುಂದುವರಿದ ನಗರಗಳಿಗೆ ಸಮಿತಿಯು ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ.

**: ಮುಂದೂಡಿದೆ :**

## 04] ವಿಷಯ ಸಂಖ್ಯೆ:/111/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್ ಸಂಖ್ಯೆ: 160ರ ರಾಜರಾಜೇಶ್ವರಿನಗರದ ಎಂಟ್ರೆನ್ಸ್ ಆರ್ಚ್‌ನ ಹತ್ತಿರ ಬೆಂಗಳೂರು ಮೈಸೂರು ರಸ್ತೆಯಿಂದ ರಾಜರಾಜೇಶ್ವರಿನಗರಕ್ಕೆ ಹೋಗುವ ರಸ್ತೆಯಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣಕ್ಕಾಗಿ 2010-11ನೇ ಸಾಲಿನ ಆಯವ್ಯದ ಪುಟ ಸಂಖ್ಯೆ: 133ರಲ್ಲಿ ರೂ. 100.00 ಲಕ್ಷಗಳ ಅನುದಾನ ಲಭ್ಯವಿದ್ದು, ರೂ. 221.00 ಲಕ್ಷಗಳಿಗೆ ಈಗಾಗಲೇ ಕಾಮಗಾರಿಗೆ ಜಾಬ್ ಸಂಖ್ಯೆ ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ನಡೆಸಿ ಮೆ: ಪರಿಚಿತಾ ಕನ್‌ಸ್ಟ್ರಕ್ಷನ್ಸ್ ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಕಾಮಗಾರಿ ಸ್ಥಳಕ್ಕನುಗುಣವಾಗಿ ಹಾಗೂ ಸೇತುವೆ ಪಾಯದ ಮಣ್ಣಿನ ಲಕ್ಷಣಗಳಿಗೆ ಅನುಗುಣವಾಗಿ ಕೆಲವೊಂದು ಮಾರ್ಪಾಡುಗಳನ್ನು ಅಂದಾಜು ಪಟ್ಟಿಯಲ್ಲಿ ಮಾಡಿಕೊಳ್ಳಬೇಕಾದ್ದರಿಂದ ಅಂದಾಜು ಪಟ್ಟಿಯನ್ನು ಪರಿಷ್ಕರಿಸಿದಾಗ ಪರಿಷ್ಕೃತ ಅಂದಾಜುಪಟ್ಟಿಯ ಮೊತ್ತ ರೂ. 268.00 ಲಕ್ಷಗಳಾಗಿದ್ದು ಮೂಲ ಅಂದಾಜು ಮೊತ್ತಕ್ಕಿಂತ ರೂ. 47.00 ಲಕ್ಷಗಳು ಹೆಚ್ಚಾಗಿರುತ್ತದೆ. ಈ ಹೆಚ್ಚುವರಿ ರೂ. 47.00 ಲಕ್ಷಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕ: 18-10-12ರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:18-10-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 05] ವಿಷಯ ಸಂಖ್ಯೆ:/112/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ: 161ರಲ್ಲಿ ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆ ನಿರ್ಮಾಣಕ್ಕಾಗಿ 2012-13ನೇ ಸಾಲಿನ ಆಯವ್ಯದ ಪುಟ ಸಂಖ್ಯೆ: 139ರ ಲೆಕ್ಕ ಶೀರ್ಷಿಕೆ ಪಿ-2434 ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಪದ್ಮನಾಭನಗರದ ವಿಧಾನ ಸಭಾ ಕ್ಷೇತ್ರದ ಶಾಸಕರು, ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರಾದ ಶ್ರೀ. ಆರ್. ಅಶೋಕ್ ರವರು ಹೊಸಕೆರೆಹಳ್ಳಿ ಸುತ್ತಮುತ್ತಲಿನ ನಿವಾಸಿಗಳಿಗೆ ಹತ್ತಿರದಲ್ಲಿ ಯಾವುದೇ ಸರ್ಕಾರಿ ಆಸ್ಪತ್ರೆ ಲಭ್ಯವಿಲ್ಲದೇ ಇರುವುದರಿಂದ ಸ್ಥಳೀಯ ನಿವಾಸಿಗಳ ಅನುಕೂಲಕ್ಕಾಗಿ ಸುಸಜ್ಜಿತ ಆಸ್ಪತ್ರೆಯನ್ನು ಮೇಲ್ಕಂಡ ಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ರೂ. 200.00 ಲಕ್ಷಗಳ ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿರುತ್ತಾರೆ. ಸ್ಥಳೀಯ ಪಾಲಿಕೆಯ ಸದಸ್ಯರು ಸಹ ಹೊಸಕೆರೆಹಳ್ಳಿ ರೆಫರಲ್ ಆಸ್ಪತ್ರೆ ಕಾಮಗಾರಿಯನ್ನು ಈ ಕೂಡಲೇ ಕೈಗೊಳ್ಳಲು ಕೋರಿ ಪತ್ರ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2012-13ನೇ ಸಾಲಿನ ಆಯವ್ಯದ ಪುಟ ಸಂಖ್ಯೆ: 139ರ ಲೆಕ್ಕ ಶೀರ್ಷಿಕೆ ಪಿ-2434 ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ. 200.00ಲಕ್ಷಗಳ ಅನುದಾನದಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು

ಜಾಬ್‌ಕೋಡ್ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 02-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 02-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 06] ವಿಷಯ ಸಂಖ್ಯೆಃ/113/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ಯಲಹಂಕ ವಲಯ ಕಾರ್ಯಪಾಲಕ ಅಭಿಯಂತರರು(ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಅನುದಾನದಲ್ಲಿ ಅನುಮೋದನೆಗೊಂಡ Widening of road from Bhadrappa Layout signal to Kodigehalli circle, chainage 0.00 mtr to 1500.00 mtr in ward No:8 ಕಾಮಗಾರಿಯನ್ನು ರೂ. 300.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಕಾಮಗಾರಿಗೆ ಮಾನ್ಯ ಆಯುಕ್ತರು ಒಪ್ಪಿಗೆ ಸೂಚಿಸಿರುತ್ತಾರೆ.

ಸದರಿ ಕಾಮಗಾರಿಗೆ, ಕಾಮಗಾರಿ ಸಂಕೇತ 008-11-000077 ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕಃ 23-05-2012ರಂದು ಹಾಗೂ ತಾಂತ್ರಿಕ ಅನುಮೋದನೆಯನ್ನು ದಿನಾಂಕಃ 28-05-2012ರಂದು ನೀಡಲಾಗಿರುತ್ತದೆ.

ದಿನಾಂಕಃ 07-06-2012ರಂದು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12 ಎಸ್.ಆರ್. ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ. 2,90,47,690.06 ಆಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ. ಸಿ.ಜಿ.ಚಂದ್ರಪ್ಪ (2) ಎಂ.ಎಸ್.ವೆಂಕಟೇಶ್ (1) ಶ್ರೀ. ಬೇಬಿಜೋಸೆಫ್ (ಪಿ.ಜೆ.ಬಿ.ಇಂಜಿನಿಯರ್ಸ್ ಪ್ರೈ ಲಿ) ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಬೇಬಿ ಜೋಸೆಫ್ ( ಪಿ.ಜೆ.ಬಿ. ಇಂಜಿನಿಯರ್ಸ್ ಪ್ರೈ.ಲಿ) ರವರು ರೂ. 2,89,99,919.88 ಗಳ ಶೇಕಡ 0.16(ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿರುತ್ತಾರೆ.

ಸದರಿ ಕಾಮಗಾರಿಯ ಅಂದಾಜುಪಟ್ಟಿ ಮೊತ್ತ ರೂ. 300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ **ಶ್ರೀ. ಬೇಬಿ ಜೋಸೆಫ್ (ಪಿ.ಜೆ.ಬಿ. ಇಂಜಿನಿಯರ್ಸ್ ಪ್ರೈ.ಲಿ) ರವರ ದರ ರೂ. 2,89,99,919.88ಗಳ ಶೇಕಡ 0.16(ಕಡಿಮೆ)** ನಮೂದಿಸಿದ್ದು ಇವರಿಗೆ ಕಾರ್ಯಾದೇಶ ನೀಡಲು ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 02-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 02-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 07] ವಿಷಯ ಸಂಖ್ಯೆಃ/114/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 168ರ ವ್ಯಾಪ್ತಿಯಲ್ಲಿ ಬರುವ ಶಾಲಿನ ಆಟದ ಮೈದಾನದ ಎದುರು ನಿರ್ಮಿಸುತ್ತಿರುವ ವಿವಿದ್ಧೋದ್ದೇಶ ಕಟ್ಟಡದ ಎರಡನೇ ಹಂತದ Costruction of Multipurpose Hall opposite to Shalini playground at Jayanagar ಕಾಮಗಾರಿಗೆ ರೂ. 100.00 ಲಕ್ಷಗಳಿಗೆ P2280 Developmental works in Jayanagar Constituencyರ ಅನುದಾನದಡಿಯಲ್ಲಿ 168-12-000061 ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಸ್ಥಳೀಯ ನಿವಾಸಿಗಳ ಕೋರಿಕೆಯಂತೆ ಹಾಗೂ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ. ಬಿ.ಎನ್. ವಿಜಯಕುಮಾರ್ ರವರು ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ

ಹಾಗೂ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ನಿರ್ವಹಿಸಲು ಮಾನ್ಯ ಆಯುಕ್ತರವರಿಗೆ ದಿನಾಂಕಃ 14-06-2012ರಂದು ಮನವಿ ಮಾಡಿಕೊಂಡಿರುತ್ತಾರೆ.

ಅದರಂತೆ ಈ ಕೆಳಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು ಕಡತವನ್ನು ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ವಿಭಾಗ ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖೇನ ನಿರ್ವಹಿಸಲು ಅನುಮೋದನೆ ಕೋರಿರುವ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 19-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 19-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## <u>08] ವಿಷಯ ಸಂಖ್ಯೆಃ/115/2012-13</u>

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಏಕಗಂಟು ಅನುದಾನದಲ್ಲಿ ಅನುಮೋದನೆಗೊಂಡ Widening of BEL road from BEL Circle to Gangamma circle ch:0.00 to 1000 mtrs, by utilization of Central Govt. and HMT factory to connect BIA ಕಾಮಗಾರಿಯನ್ನು ರೂ. 250.00 ಲಕ್ಷದೊಳಗಾಗಿ ಕೈಗೊಳ್ಳಲು ಕ್ರಮವಹಿಸುವಷ್ಟರಲ್ಲಿ ಶ್ರೀ. ಎಸ್.ಆರ್. ವಿಶ್ವನಾಥ್ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದಿದ್ದು, ಪ್ರಸ್ತಾಪಿಸಲಾದ ಸದರಿ ಕಾಮಗಾರಿಯ ಸ್ಥಳ ಬದಲಾವಣೆ ಮಾಡಲು ಅಂದರೆ strenghening and asphalting to Doddaballapura main road from Allalasandra railway gate to Puttenahalli village at Yelahanka ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿರುತ್ತಾರೆ.

ಸ್ಥಳ ಬದಲಾವಣೆ ಕಾಮಗಾರಿಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿದ್ದು, ಸದರಿ ಕಾಮಗಾರಿಗೆ, ಕಾಮಗಾರಿ ಸಂಕೇತ 303-11-000040 ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕಃ 19-07-2012ರಂದು ಹಾಗೂ ತಾಂತ್ರಿಕ ಅನುಮೋದನೆಯನ್ನು ದಿನಾಂಕಃ 20-07-2012ರಂದು ನೀಡಲಾಗಿರುತ್ತದೆ.

ದಿನಾಂಕಃ 25-07-2012ರಂದು ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್.ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ. 2,49,43,850.77 ಅಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ.ಸಿ.ಜಿ.ಚಂದ್ರಪ್ಪ (2) ಶ್ರೀ.ಎಂ.ಎಸ್.ವೆಂಕಟೇಶ್ (3) ಮೆಃ ಎಸ್.ಎಲ್.ಪಿ ಇನ್ಫ್ರಾಸ್ಟ್ರಕ್ಚರ್ ಪ್ರೈಲಿ. ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಸಿ.ಜಿ.ಚಂದ್ರಪ್ಪ ರವರು ರೂ. 2,28,46,944/-ಗಳ ಶೇಕಡ <8.48(ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿದ್ದು, ಸದರಿ ಕಾಮಗಾರಿಯ ಅಂದಾಜುಪಟ್ಟಿಗೆ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರಿಕರಿಸಲು ಅನುಮೋದನೆ ಮತ್ತು ಯಶಸ್ವಿ ಗುತ್ತಿಗೆದಾರರಾದ ಶ್ರೀ. ಸಿ.ಜಿ.ಚಂದ್ರಪ್ಪ ರವರು ನಮೂದಿಸಿರುವ ರೂ. 2,28,46,944/-ಗಳ ಶೇಕಡ <8.48 (ಕಡಿಮೆ) ಗಳ ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಿ ಕಾರ್ಯಾದೇಶ ನೀಡಲು ಅನುಮತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 19-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 19-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 09] ವಿಷಯ ಸಂಖ್ಯೆಃ/116/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಏಕಗಂಟು ಅನುದಾನದಲ್ಲಿ ಅನುಮೋದನೆಗೊಂಡ Widening of BEL road from BEL Circle to Gangamma circle ch:1000 to 2000 mtrs, by utilization of Central Govt. and HMT factory to connect BIA ಕಾಮಗಾರಿಯನ್ನು ರೂ. 250.00 ಲಕ್ಷದೊಳಗಾಗಿ ಕೈಗೊಳ್ಳಲು ಕ್ರಮವಹಿಸುವಷ್ಟರಲ್ಲಿ ಶ್ರೀ. ಎಸ್.ಆರ್. ವಿಶ್ವನಾಥ್ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದಿದ್ದು, ಪ್ರಸ್ತಾಪಿಸಲಾದ ಸದರಿ ಕಾಮಗಾರಿಯ ಸ್ಥಳ ಬದಲಾವಣೆ ಮಾಡಲು ಅಂದರೆ strenghening and asphalting to Doddaballapura main road from Puttenhalli village to BMS college at Yelahanka ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿರುತ್ತಾರೆ.

ಸ್ಥಳ ಬದಲಾವಣೆ ಕಾಮಗಾರಿಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿದ್ದು, ಸದರಿ ಕಾಮಗಾರಿಗೆ, ಕಾಮಗಾರಿ ಸಂಕೇತ 303-11-000039 ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕಃ 19-07-2012ರಂದು ಹಾಗೂ ತಾಂತ್ರಿಕ ಅನುಮೋದನೆಯನ್ನು ದಿನಾಂಕಃ 20-07-2012ರಂದು ನೀಡಲಾಗಿರುತ್ತದೆ.

ದಿನಾಂಕಃ 25-07-2012ರಂದು ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್.ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ. 2,48,95,341.03 ಅಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ.ಸಿ.ಜಿ.ಚಂದ್ರಪ್ಪ (2) ಶ್ರೀ.ಎಂ.ಎಸ್.ವೆಂಕಟೇಶ್ (3) ಮೆಃ ಎಸ್.ಎಲ್.ಪಿ ಇನ್ಫ್ರಾಸ್ಟ್ರಕ್ಚರ್ ಪ್ರೈಲಿ. ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಸಿ.ಜಿ.ಚಂದ್ರಪ್ಪ ರವರು ರೂ. 2,27,68,479/-ಗಳ ಶೇಕಡ <8.54(ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿದ್ದು, ಸದರಿ ಕಾಮಗಾರಿಯ ಅಂದಾಜುಪಟ್ಟಿ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರಿಕರಿಸಲು ಅನುಮೋದನೆ ಮತ್ತು ಯಶಸ್ವಿ ಗುತ್ತಿಗೆದಾರರಾದ ಶ್ರೀ. ಸಿ.ಜಿ.ಚಂದ್ರಪ್ಪ ರವರು ನಮೂದಿಸಿರುವ ರೂ. 2,27,68,479/-ಗಳ ಶೇಕಡ <8.54 (ಕಡಿಮೆ) ಗಳ ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಿ ಕಾರ್ಯಾದೇಶ ನೀಡಲು ಅನುಮತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 19-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 19-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 10] ವಿಷಯ ಸಂಖ್ಯೆಃ/117/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರಿಂದ 2010-11ನೇ ಸಾಲಿನಲ್ಲಿ ಏಕಗಂಟು ಅನುದಾನದಲ್ಲಿ ಅನುಮೋದನೆಗೊಂಡ Widening of ayyappa swamy temple road from to Gangamma circle to Jalahalli circle 0.00 mtr to 1000.00 mtr by utilization of Airforce Defence land to connect BIA ಕಾಮಗಾರಿಯನ್ನು ರೂ. 250.00 ಲಕ್ಷದೊಳಗಾಗಿ ಕೈಗೊಳ್ಳಲು ಕ್ರಮವಹಿಸುವಷ್ಟರಲ್ಲಿ ಶ್ರೀ. ಎಸ್.ಆರ್. ವಿಶ್ವನಾಥ್ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರು ಮಾನ್ಯ ಆಯುಕ್ತರವರಿಗೆ ಪತ್ರ ಬರೆದಿದ್ದು, ಪ್ರಸ್ತಾಪಿಸಲಾದ ಸದರಿ ಕಾಮಗಾರಿಯ ಸ್ಥಳ ಬದಲಾವಣೆ ಮಾಡಲು ಅಂದರೆ strenghening and asphalting to Yelahanka Yeshvanthpur road from Zum Zum gate airforce station near M.S. near M.S. Palya to Attur cross at Yelahanka ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿರುತ್ತಾರೆ.

ಸ್ಥಳ ಬದಲಾವಣೆ ಕಾಮಗಾರಿಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿದ್ದು, ಸದರಿ ಕಾಮಗಾರಿಗೆ, ಕಾಮಗಾರಿ ಸಂಕೇತ 303-11-000036 ನೀಡಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕಃ 19-07-2012ರಂದು ಹಾಗೂ ತಾಂತ್ರಿಕ ಅನುಮೋದನೆಯನ್ನು ದಿನಾಂಕಃ 20-07-2012ರಂದು ನೀಡಲಾಗಿರುತ್ತದೆ.

ದಿನಾಂಕಃ 25-07-2012ರಂದು ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗೆ 2011-12ರ ಎಸ್.ಆರ್.ದರ ಸೂಚಿಯಂತೆ ಅನುಮೋದನೆಗೊಂಡ ಮೊತ್ತ ರೂ. 2,49,46,579.10 ಅಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 3 ಜನ ಗುತ್ತಿಗೆದಾರರಾದ (1) ಶ್ರೀ.ಸಿ.ಜಿ.ಚಂದ್ರಪ್ಪ (2) ಶ್ರೀ.ಎಂ.ಎಸ್.ವೆಂಕಟೇಶ್ (3) ಮೆಃ ಎಸ್.ಎಲ್.ಪಿ ಇನ್ಫ್ರಾಸ್ಟ್ರಕ್ಚರ್ ಪ್ರೈಲಿ. ರವರು ಭಾಗವಹಿಸಿದ್ದು, ಇದರಲ್ಲಿ ಶ್ರೀ. ಸಿ.ಜಿ.ಚಂದ್ರಪ್ಪ ರವರು ರೂ.2,33,46,247/-ಗಳ ಶೇಕಡ <6.24(ಕಡಿಮೆ) ನಮೂದಿಸಿ ಕಾಮಗಾರಿಯನ್ನು ನಿರ್ವಹಿಸಲು ಯಶಸ್ವಿ ಬಿಡ್‌ದಾರರಾಗಿದ್ದು, ಸದರಿ ಕಾಮಗಾರಿಯ ಅಂದಾಜುಪಟ್ಟಿ ರೂ.250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರಿಕರಿಸಲು ಅನುಮೋದನೆ ಮತ್ತು ಯಶಸ್ವಿ ಗುತ್ತಿಗೆದಾರರಾದ ಶ್ರೀ. ಸಿ.ಜಿ.ಚಂದ್ರಪ್ಪ ರವರು ನಮೂದಿಸಿರುವ ರೂ.2,33,46,247/-ಗಳ ಶೇಕಡ <6.42 (ಕಡಿಮೆ) ಗಳ ಗುತ್ತಿಗೆ ಮೊತ್ತಕ್ಕೆ ಅನುಮೋದನೆ ನೀಡಿ ಕಾರ್ಯಾದೇಶ ನೀಡಲು ಅನುಮತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 19-11-12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 19-11-2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 11] ವಿಷಯ ಸಂಖ್ಯೆಃ/118/2012-13

ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ಕುಮಾರಸ್ವಾಮಿ ಲೇಔಟ್ ವಾರ್ಡ್ ಸಂಖ್ಯೆಃ 181ರ ಕುಮಾರಗಿರಿಯಲ್ಲಿರುವ ಆಟದ ಮೈದಾದಲ್ಲಿ ಕ್ರೀಡಾ ಸಂಕೀರ್ಣವನ್ನು ನಿರ್ಮಾಣ ಮಾಡಲು ರೂ. 250.00 ಲಕ್ಷಗಳ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಮೊದಲು ಎರಡು ಬಾರಿ ಯಾವ ಗುತ್ತಿಗೆದಾರರರು ಭಾಗವಹಿಸಿರುವುದಿಲ್ಲ, ದಿನಾಂಕಃ 16-02-2012ರಂದು ಮೂರನೇ ಬಾರಿಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರಾದ (1) ಶ್ರೀ. ವಿ.ವಿಶ್ವನಾಥ (2) ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರು ಭಾಗವಹಿಸಿರುತ್ತಾರೆ. ಹಾಗೂ ತಾಂತ್ರಿಕ ಬಿಡ್ಡಿನಲ್ಲಿ ಅರ್ಹರಾಗಿರುತ್ತಾರೆ. ಮುಖ್ಯ ಅಭಿಯಂತರರು(ದಕ್ಷಿಣ) ರವರಿಂದ ಅನುಮೋದನೆ ಪಡೆದು ಆರ್ಥಿಕ ಬಿಡ್ಡನ್ನು ದಿನಾಂಕಃ 28-09-2012 ರಂದು ತೆರೆಯಲಾಯಿತು. ಸದರಿ ಆರ್ಥಿಕ ಬಿಡ್ಡಿನ ವಿವರಗಳು ಕೆಳಕಂಡಂತಿವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ | ನಮೂದಿಸಿರುವ ದರ | 2010-11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ | ಸಂಧಾನಿತ ದರ ಪ್ರಸಕ್ತ ಸಾಲಿನ ದರದಂತೆ ಹೋಲಿಸಿದಾಗ (ಎಸ್.ಆರ್. 2012-13) |
|---|---|---|---|---|---|
| 1 | ಶ್ರೀ. ವಿ.ವಿಶ್ವನಾಥ | 2,33,28,539/- | 3,10,09,755/- | 32.93% ಹೆಚ್ಚು | |
| 2 | ಶ್ರೀ.ಮುನಿವೆಂಕಟಪ್ಪ ರಾಜೇಂದ್ರ | | 2,99,96,127/- | 28.58% ಹೆಚ್ಚು | 11.76% ಹೆಚ್ಚು |

ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರು ರೂ. 2,99,96,127/- (11.76% ಹೆಚ್ಚುವರಿ 2012-13ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ) ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ದಿನಾಂಕಃ 03-10-2012ರಂದು ಸದರಿ ಗುತ್ತಿಗೆದಾರರಿಗೆ ದರಸಂದಾನಕ್ಕಾಗಿ ಪತ್ರ ನೀಡಲಾಗಿದ್ದು, ದಿನಾಂಕಃ17-10-2012ರಂದು ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರು ಪತ್ರ ನೀಡಿ ನಮೂದಿಸಿರುವ ಮೊತ್ತ ರೂ. 2,99,96,127/-ಗಳು ಪ್ರಸ್ತುತ ಮಾರುಕಟ್ಟೆಯಲ್ಲಿ ಸಿಮೆಂಟ್, ಸ್ಟೀಲ್ ಇತ್ಯಾದಿಗಳ ದರಗಳು ಹೆಚ್ಚುತ್ತಿದ್ದು ಹಾಗೂ ಸದರಿ ಕಾಮಗಾರಿಯೂ ಕಟ್ಟಡ ನಿರ್ಮಾಣದ ಕಾಮಗಾರಿಯಾಗಿರುವುದರಿಂದ ನಮೂದಿಸಿರುವ ದರಗಳು ಸಮಂಜಸವಾಗಿರುವುದೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಶ್ರೀ. ಮುನಿವೆಂಕಟಪ್ಪ ರಾಜೇಂದ್ರ ರವರು ನಮೂದಿಸಿರುವ ಒಟ್ಟು ಮೊತ್ತ ರೂ. 2,99,96,127/- 2012-13ನೇ ಸಾಲಿನ ದರಪಟ್ಟಿಗೆ

ಹೋಲಿಸಿದಾಗ 11.76% ಹೆಚ್ಚುವರಿ ಗುತ್ತಿಗೆ ಮೊತ್ತಕ್ಕೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 19–11–12ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕಃ 19–11–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

**(ಎನ್.ಆರ್.ಶ್ರೀಧರ ರೆಡ್ಡಿ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**ಪ್ರತಿಯನ್ನುಃ**

1. **ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.**
2. **ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.**
3. **ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.**
4. **ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.**
5. **ಆಯುಕ್ತರವರಿಗೆ ಕಳುಹಿಸಿದೆ.**
6. **ವಿಶೇಷ ಆಯುಕ್ತರವರಿಗೆ ಕಳಹಿಸಿದೆ.**
7. **ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**
8. **ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**
9. **ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**
10. **ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**
11. **ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**